# SIR ವಿರೋಧಿ ಜಾತ್ಯತೀತ ಪಕ್ಷಗಳು-
# ಜನಪರ ಸಂಘಟನೆಗಳ ಒಕ್ಕೂಟ ಕರ್ನಾಟಕ

**ನಂ. 10/2, ಜುವೆಲ್ ರೆಸಿಡೆನ್ಸಿ ಪ್ಲಾಟ್ ನಂ. 301, 3 ನೆಯ ಮಹಡಿ, ರಿಸಲ್ದಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು- 560021. ಸಂಪರ್ಕ: 9880453799, 9342658829, 9448256216**


ದಿನಾಂಕ: 27.11.2026

ಇವರಿಗೆ,

ಶ್ರೀ. ಡಿ.ಕೆ. ಶಿವಕುಮಾರ್

ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ.

ಮಾನ್ಯರೇ,

**ವಿಷಯ: ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ಸರ್ಕಾರ SIR ಕುರಿತು ಸ್ಪಷ್ಟ ಹಾಗೂ ಖಚಿತ ತೀರ್ಮಾನ ತೆಗೆದುಕೊಳ್ಳಲೇಬೇಕೆಂದು ಒತ್ತಾಯಿಸಿ.**

ಮೊದಲಿಗೆ ಕೆಲವು ಬಹುಮುಖ್ಯ ಮಾಹಿತಿಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇವೆ. ಇವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

- **ಕೇಂದ್ರ ಚುನಾವಣಾ ಆಯೋಗ ಪರೋಕ್ಷ ರೀತಿಯಲ್ಲಿ ತನ್ನ ಪ್ರಕ್ರಿಯೆ ದೋಷಪೂರಿತವಾದುದು ಎಂದು ಒಪ್ಪಿಕೊಂಡಿದೆ.** ಹದ್ದುಮೀರಿ ನಡೆದುಕೊಂಡು ಸರ್ವೋಚ್ಚ ನ್ಯಾಯಲದ ಕಟಕಟೆಯಲ್ಲಿ ಬಹಳ ಕೆಟ್ಟದಾಗಿ ಸಿಕ್ಕಿ ಹಾಕಿಕೊಂಡಿರುವ ಆಯೋಗ ತಲೆದಂಡದಿಂದ ತಪ್ಪಿಸಿಕೊಳ್ಳಲು **ನವೆಂಬರ್ 6 ರಂದು** ಹೊಸ ಕಾರ್ಯಸೂಚಿಯನ್ನು SIR ಮುಂದುವರಿಯುತ್ತಿರುವ 7 ರಾಜ್ಯಗಳಿಗೆ ಕಳಿಸಿದೆ. ಅದರಲ್ಲಿ ತನ್ನ ಹಳೇ ನಿಲುವುಗಳಿಂದ U ಟರ್ನ್ ಹೊಡೆದಿದೆ.
  - **ಡಿಲೀಟ್ ಆದವರ ಪಟ್ಟಿಯನ್ನು ಪ್ರತಿ ಬೂತಿನಲ್ಲಿ ಪ್ರಕಟಿಸಿ**, ಡಿಲೀಟ್ ಆದವರ ಮನೆಗಳಿಗೆ ಮತ್ತೊಮ್ಮೆ ಭೇಟಿ ನೀಡಿ, ತಪ್ಪಾಗಿ ಡಿಲೀಟ್ ಮಾಡಲ್ಪಟ್ಟವರನ್ನು ಕೈಬಿಡದೆ ಉಳಿಸಿಕೊಳ್ಳಲು ಎಲ್ಲಾ ರೀತಿಯ ಪ್ರಯತ್ನ ಮಾಡಬೇಕೆಂದು ತಾಕೀತು ಮಾಡಿದೆ.
  - **ತಪ್ಪಾಗಿ ಕೈಬಿಟ್ಟವರಿಂದ "ಫಾರಂ 6ಅನ್ನು ತುಂಬಿಸಿಕೊಳ್ಳಬಾರದು" ಎಂದು ಸೂಚಿಸಿದೆ.** ಅಂಥವರಿಗೆ ಮತ್ತೊಮ್ಮೆ ಎನ್ಯುಮುರೇಷನ್ ಫಾರಂ ಅನ್ನೇ ಕೊಟ್ಟು ಹಳೆ ಎಪಿಕ್ ಐಡಿಯಲ್ಲೇ ತೆಗೆದುಕೊಳ್ಳಿ ಎಂದು ಸೂಚಿಸಿದೆ.
  - **ಒಂದು ವೇಳೆ ಅವರು ಬೇರೆ ಕಡೆಗೆ ಶಿಫ್ಟ್ ಆಗಿದ್ದರೂ ಅವರನ್ನೂ ಡಿಲೀಟ್ ಮಾಡದೆ**, ಅಕ್ಕಪಕ್ಕದವರಿಂದ ವಿಚಾರಿಸಿ, ಅವರನ್ನು ಸಂಪರ್ಕಿಸಿ, ಅವರಿಂದ ಎನ್ಯುಮುರೇಷನ್ ಫಾರಂ ಮತ್ತು ಹೊಸ ವಿಳಾಸದ ವಿವರ ಪಡೆದು ಮತದಾರರ ಪಟ್ಟಿಯಲ್ಲಿ ಉಳಿಸಿಕೊಳ್ಳಿ ಎಂದು ಹೇಳಿದೆ.
  - **ಅಲ್ಲದೆ SIR ಮುಗಿದಿರುವ ರಾಜ್ಯಗಳಲ್ಲಿ SSR ನಡೆಸಲು ಆದೇಶಿಸಿದೆ.** ಮತ್ತೊಂದು ಅಭಿಯಾನ ನಡೆಸಿ ಬಿಟ್ಟುಹೋದವರನ್ನು ಸೇರ್ಪಡೆ ಮಾಡಿಕೊಳ್ಳಲು ಎಲ್ಲಾ ಪ್ರಯತ್ನ ಮಾಡಬೇಕೆಂದು ಸೂಚಿಸಲಾಗಿದೆ. ಈ SSR ಕರ್ನಾಟಕದಲ್ಲಿ ಡಿಸೆಂಬರ್ ತಿಂಗಳಿನಲ್ಲಿ ನಡೆಯಲಿದೆ.
- **ಕರ್ನಾಟಕದಲ್ಲಿ ಅಂತಿಮ ಎಂದು ಪ್ರಕಟಗೊಂಡಿರುವ SIR ಪಟ್ಟಿ ತರ್ಕಹೀನವಾಗಿದೆ** ಮತ್ತು ಅನೇಕ ದೋಷಗಳಿಂದ ಕೂಡಿದೆ. ಸರ್ಕಾರಿ ಅಂಕಿಅಂಶಗಳ ಪ್ರಕಾರ ಕರ್ನಾಟಕದಲ್ಲಿ 18 ವರ್ಷ ದಾಟಿರುವ ವಯಸ್ಕರ ಜನಸಂಖ್ಯೆ 5.2 ಕೋಟಿ. ಹೀಗಿರುವಾಗ ಮತದಾರರ ಪಟ್ಟಿಯಲ್ಲಿ 4.5 ಕೋಟಿ ಜನರು ಮಾತ್ರ ಉಳಿಯಲು ಹೇಗೆ ಸಾಧ್ಯ? ಉಳಿದ 70 ಲಕ್ಷ ಜನರು ಏಕೆ ಮತದಾರರ

ಪಟ್ಟಿಯಲ್ಲಿ ಇಲ್ಲ? ಬೆಂಗಳೂರು ವೇಗಗತಿಯಲ್ಲಿ ಬೆಳೆಯುತ್ತಿರುವಾಗ ಮತದಾರರ ಪಟ್ಟಿಯಲ್ಲಿ ಅರ್ಧಕ್ಕರ್ಧ ಜನರು ಕಣ್ಮರೆಯಾಗಲು ಹೇಗಾದರೂ ಸಾಧ್ಯ? "ಮತ ಕಾವಲು ಸಮಿತಿ" ಪರಿಶೋಧನೆ ನಡೆಸಿದ ಎಲ್ಲಾ 73 ಬೂತುಗಳಲ್ಲೂ ತಪ್ಪಾಗಿ ಡಿಲೀಟ್ ಆದ ನೂರಾರು ಉದಾಹರಣೆಗಳು ಸಿಕ್ಕಿರುವಾಗ ಇಡೀ ರಾಜ್ಯದ 54 ಸಾವಿರ ಬೂತುಗಳಲ್ಲಿ ಡಿಲೀಟ್ ಆದ ಎಷ್ಟು ಜನ ಇರಬಹುದು? ಪ್ರಕಾಶ್ ರಾಜ್ ರೀತಿ ತಪ್ಪಾದ ಕಾರಣಕ್ಕೆ ಡಿಲೀಟ್ ಮಾಡಲ್ಪಟ್ಟ ಜೀವಂತ ಉದಾಹರಣೆ ಕಣ್ಣ ಮುಂದೆಯೇ ಇದ್ದರೂ ಅವರನ್ನು ಸಕ್ರಮ ರೀತಿಯಲ್ಲಿ ನೊಂದಾಯಿಸಿಕೊಳ್ಳದೆ ಹೊರಗಿಟ್ಟು ಏತಕ್ಕೆ ಹಟ ಸಾಧಿಸುತ್ತಿದ್ದೀರಿ? ಈ ಯಾವ ಪ್ರಶ್ನೆಗಳಿಗೂ ಚುನಾವಣಾ ಆಯೋಗದ ಬಳಿ ಉತ್ತರವಿಲ್ಲ.

- **SIR ಅನ್ನು ದೇಶದ ಎಲ್ಲಾ ನಾಗರೀಕ ಸಂಘಟನೆಗಳು ಸಾರಾಸಗಟು ತಿರಸ್ಕರಿಸಿವೆ.** ಈಗ "People Against SIR" ಎಂಬ ಅಖಿಲ ಭಾರತ ಮಟ್ಟದ ವೇದಿಕೆ ರೂಪಿಸಿಕೊಂಡು "ಗ್ಯಾನೇಶ್ ಕುಮಾರ್ ರಾಜೀನಾಮಿಗಾಗಿ ಮತ್ತು SIR ರದ್ದತಿಗಾಗಿ" ನಿರಂತರ ಆಂದೋಲನಕ್ಕೆ ಇಳಿದಿವೆ. ಬಿಜೆಪಿ ಹೊರತುಪಡಿಸಿದಂತೆ ಮಿಕ್ಕೆಲ್ಲಾ ಪಕ್ಷಗಳು SIR ಅನ್ನು ತಿರಸ್ಕರಿಸಿವೆ.. ಚಳಿಗಾಲದ ಅಧಿವೇಶನದ ವೇಳೆ ಸಂಸತ್ತಿನ ಹೊರಗೂ ಮತ್ತು ಒಳಗೂ ಈ ಹೋರಾಟ ಮತ್ತಷ್ಟು ಬಿಸಿ ಏರಲಿದೆ.
- **ಆದರೆ ಕರ್ನಾಟಕದ ಕೆಲ ಸಚಿವರು SIR ಕುರಿತು ಬಹಳ ಬೇಜವಬ್ದಾರಿಯ ಹೇಳಿಕೆ ನೀಡುತ್ತಿದ್ದಾರೆ.** ಇದು ನಮಗೆ ತೀವ್ರ ನೋವು ಮತ್ತು ಬೇಸರ ತಂದಿದೆ. ಇಡೀ ದೇಶ SIR ವಿರುದ್ಧ ಹೋರಾಡುತ್ತಿರುವಾಗ "SIR ನಿಂದ ನಮಗೆ ನಷ್ಟವಾಗಿಲ್ಲ, ಲಾಭವೇ ಆಗಿದೆ, ಅದನ್ನೇ ಬಳಸಿ ಸ್ಥಳೀಯ ಚುನಾವಣೆ ನಡೆಸೋಣ" ಎಂಬ ಮಾತುಗಳು ಬೇಜವಬ್ದಾರಿತನವನ್ನು ಮತ್ತು ಸಂಕುಚಿತ ರಾಜಕೀಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತಿವೆ.

**ಈ ಹಿನ್ನೆಲೆಯಲ್ಲಿ ನಾವು ನಿಮ್ಮಲ್ಲಿ ಕೇಳಿಕೊಳ್ಳುವುದೆಂದರೆ.**

1. SIR ಪ್ರಕ್ರಿಯೆ ಅಸಂವಿಧಾನಿಕವಾದುದರಿಂದ, ಚುನಾವಣಾ ಆಯೋಗವೇ ತಾನು ನಡೆಸಿದ ಪ್ರಕ್ರಿಯೆ ತಪ್ಪು ಎಂದು ಒಪ್ಪಿಕೊಂಡಿರುವುದರಿಂದ, ಕರ್ನಾಟಕದಲ್ಲಿ ಮತದಾರರ ಪಟ್ಟಿಯಲ್ಲಿನ ಸಂಖ್ಯೆ ದೊಡ್ಡ ಮಟ್ಟಕ್ಕೆ ಇಳಿಕೆಯಾಗಲು ಸಮರ್ಥ ಕಾರಣ ನೀಡುವುದರಲ್ಲಿ ಕೇಂದ್ರ ಚುನಾವಣಾ ಆಯೋಗ ವಿಫಲವಾಗಿರುವುದರಿಂದ ಮತ್ತು "ನಾಗರೀಕ ಮತ ಕಾವಲು ಸಂಸ್ಥೆ" ಮತ್ತು ಹಲವು ಪತ್ರಿಕೆಗಳು ಅರ್ಹ ಮತದಾರರು ತಪ್ಪಾಗಿ ಡಿಲೀಟ್ ಆಗಿರುವ ಸಾಕ್ಷ್ಯಾಧಾರಗಳನ್ನು ಪರಿಶೋಧನೆಯ ಮೂಲಕ ಮುಂದಿಟ್ಟಿರುವುದರಿಂದ **'SIR ಅಂತಿಮ ಪಟ್ಟಿಯನ್ನು ತಿರಸ್ಕರಿಸುತ್ತಿದ್ದೇವೆ'** ಎಂದು ಸರ್ಕಾರ ತಡಮಾಡದೆ ಘೋಷಿಸಬೇಕು.
2. ವೈಜ್ಞಾನಿಕವಾದ, ಜನಸ್ನೇಹಿತಯಾದ ರೀತಿಯಲ್ಲಿ **"ಸಾರ್ವಜನಿಕ ಪರಿಶೀಲನೆ"ಯ** ಮೂಲಕ 2025 ರ ಮತಪಟ್ಟಿಯನ್ನೇ ಪರಿಷ್ಕರಿಸಿ ಸ್ಥಳೀಯ ಚುನಾವಣೆಗಳಿಗೆ ಬಳಸಬೇಕು.
3. ಕರ್ನಾಟಕದಲ್ಲಿ SIR ನಿಂದ ಅನಾಹುತವಾಗಿಲ್ಲ ಎಂಬ ರೀತಿಯಲ್ಲಿ ಕೆಲವರು ಕಾಂಗ್ರೆಸ್ ನಾಯಕರು ಮಾತನಾಡುತ್ತಿದ್ದಾರೆ. ಒಂದು ಕ್ಷೇತ್ರದಲ್ಲಿ SIR ನಿಂದ ಒಂದು ಪಕ್ಷಕ್ಕೆ ಲಾಭವಾಗಿದೆಯೇ, ನಷ್ಟವಾಗಿದೆಯೇ ಎಂಬ ಸೀಮಿತ ದೃಷ್ಟಿಕೋನದಿಂದ ಇದರ ಕುರಿತು ತೀರ್ಮಾನ ತೆಗೆದುಕೊಳ್ಳಬಾರದು. ಈ ಪ್ರಕ್ರಿಯೆ ನೀತಿಬದ್ಧವಾಗಿಲ್ಲದಿರುವುದರಿಂದ ಮತ್ತು ದೊಡ್ಡ ಸಂಖ್ಯೆಯ ಅರ್ಹ ಮತದಾರರು ಮತಪಟ್ಟಿಯಿಂದ ಕೈಬಿಟ್ಟು ಹೋಗಿರುವುದರಿಂದ ಸರಿಯಾದ ವಿಧಾನದಲ್ಲಿ ಮತಪಟ್ಟಿಯ ಪರಿಷ್ಕರಣೆ ನಡೆಸಿ ಯಾರೊಬ್ಬ ಮತದಾರರೂ ಹಕ್ಕು ವಂಚಿತರಾಗದಂತೆ ನೋಡಿಕೊಳ್ಳುವ ತಾತ್ವಿಕ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು. **ಕಾಂಗ್ರೆಸ್ ಮುಖಂಡರ ಸೀಮಿತ ನೋಟದ ಅನಾಹುತಕಾರಿ ಮಾತುಗಳಿಗೆ ತಾವು ತಡೆ ಹಾಕಬೇಕು.**

**ವಂದನೆಗಳು.**

**SIR ವಿರೋಧಿ ಕರ್ನಾಟಕದ ಪರವಾಗಿ**